

ಪುಂಡ: ಅಲ್ಲಯ್ಯಾ, ನಿನ್ನ ಹೆಣ್ತಿ ತವರು ಮನೆಗೆ ಹೋದ್ರೆ ದಿನಾಲೂ ವಿಡಿಯೊ ಕಾಲ್ ಮಾಡ್ತಿಯಲ್ಲ. ಎಷ್ಟೊಂದು ಪ್ರೀತಿ ನಿನಗೆ ಅವಳ ಮೇಲೆ.

ದುಂಡ್ಯಾ: ಎಲ್ಲಿಯ ಪ್ರೀತಿ ಮಾರಾಯಾ, ದಿನಾಲೂ ಅವಳಿಗೆ ವಿಡಿಯೊ ಕಾಲ್ ಮಾಡ್ಲಿಲ್ಲ ಅಂದ್ರೆ ತವರು ಮನೆಯಿಂದ ಬಂದು ಬಿಡ್ತೀನಿ ಅಂದಿದ್ದಾಳೆ.

***

ಪೊಲೀಸ್ ಠಾಣೆಗೆ ಅವಸರದಿಂದ ಬಂದ ದುಂಡ್ಯಾ ಸಾರ್... ಸಾರ್... ನನ್ನನ್ನು ಹೇಗಾದರೂ ಮಾಡಿ ಕಾಪಾಡಬೇಕು ಎಂದು ಒಂದೇ ಉಸಿರಿಗೆ ನುಡಿದ.

ಏನಯ್ಯಾ, ಏನಾಯ್ತು? ಅದನ್ನು ಮೊದಲು ಹೇಳು? ಡ್ಯೂಟಿ ಇನ್‌ಸ್ಪೆಕ್ಟರ್ ಕೇಳಿದರು.

ಸಾರ್, ನಾನು ನನ್ನ ಹೆಂಡತಿಗೆ ಗುಂಡು ಹಾರಿಸಿಬಿಟ್ಟೆ!

ಅಯ್ಯೋ, ಅದು ಕೊಲೆ. ಅದರಿಂದ ಬಚಾವು ಮಾಡಲು ಸಾಧ್ಯವೇ ಇಲ್ಲ ಇನಸ್ಪೆಕ್ಟರ್ ನುಡಿದರು.

ಸಾರ್, ನಾನು ಕೊಲೆ ಮಾಡಿಲ್ಲ. ಹೊಡೆದ ಗುಂಡು ಅವಳಿಗೆ ತಾಗಿಲ್ಲ. ಈಗ ಮಚ್ಚು ತೆಗೆದುಕೊಂಡು ನನ್ನನ್ನು ಕೊಲ್ಲಲು ಬೆನ್ನಟ್ಟಿ ಬರ್ತಿದಾಳೆ ದಯವಿಟ್ಟು ಕಾಪಾಡಿ ಎಂದು ದುಂಡ್ಯಾ ಗೋಗರೆದ.

***

ದುಂಡೆವ್ವ: ರೀ, ಯಾಕ್ರೀ ದಿನಾ ಸಕ್ರೆ ಡಬ್ಬ ತೆಗೆದು ನೋಡ್ತೀರಾ?

ದುಂಡ್ಯಾ: ಲೇ, ಸಕ್ರೆ ಪ್ರಮಾಣ ಎಷ್ಟಿದೆ ಅಂತ ದಿನಾಲೂ ಚೆಕ್ ಮಾಡ್ಲಿಕ್ಕೆ ಡಾಕ್ಟ್ರು ಹೇಳಿದಾರೆ.

***

ದುಂಡ್ಯಾ: ನಾನು ಪಂಚಾಯಿತಿ ಮೆಂಬರ್ ಆದ್ರೆ ಗ್ರಾಮ ಬದಲಾಯಿಸ್ತೀನಿ, ಎಂಎಲ್ಎ ಆದ್ರೆ ತಾಲ್ಲೂಕು ಬದಲಾಯಿಸ್ತೀನಿ. ಮುಖ್ಯಮಂತ್ರಿ ಆದ್ರೆ ರಾಜ್ಯ ಬದಲಾಯಿಸ್ತೀನಿ, ಪ್ರಧಾನ ಮಂತ್ರಿ ಆದ್ರೆ ದೇಶ ಬದಲಾಯಿಸ್ತೀನಿ.

ದುಂಡೆವ್ವ: ರೀ, ಆದಾಗ ಬದಲಾಯಿಸುವಂತ್ರಿ ಈಗ ನೀವು ಲುಂಗಿ ಅಂತ ಹಾಕ್ಕೊಂಡಿರೋ ನನ್ನ ಸೀರೆ ಬದಲಾಯಿಸಿ ಸಾಕು.

***

ಆರತಕ್ಷತೆ ಮುಗಿದು ಭೋಜನ ಮಾಡಿಕೊಂಡು ದುಂಡ್ಯಾ, ಗುಂಡ್ಯಾ ಮನೆ ಕಡೆ ಹೊರಟರು.

ದುಂಡ್ಯಾ ಹೊರಗೆ ಬಂದು ನನ್ನ ಛತ್ರಿ ಕಾಣ್ತಾ ಇಲ್ಲ. ನಿಲ್ಲು ಹುಡುಕ್ಕೀನಿ ಅಂದ.

ಹಾಗಾದ್ರೆ ನೀನು ಬೇಗ ಹುಡುಕು ನಾನು ತಾಂಬೂಲ ಸೇವನೆ ಮಾಡಿ ಬರ್ತೀನಿ ಅಂತ ಕಲ್ಯಾಣ ಮಂಟಪದೊಳಗೆ ಗುಂಡ್ಯಾ ಹೋದ. ಅವನು ಹತ್ತು ನಿಮಿಷವಾದ ಮೇಲೆ ಹೊರಬಂದು ದುಂಡ್ಯಾ ನಿನ್ನ ಛತ್ರಿ ಇನ್ನೂ ಸಿಗಲಿಲ್ಲವಾ? ಅಂತ ಕೇಳಿದ.

ದುಂಡ್ಯಾ ನನ್ನ ಛತ್ರಿ ಇಲ್ಲೇ ಇದೆ ಮಾರಾಯಾ. ಆದ್ರೆ ಯಾವುದಾದರೂ ಒಳ್ಳೆಯ ಛತ್ರಿ ಇದೆಯಾ ಅಂತ ಹುಡುಕ್ತಿದೀನಿ ಅಂದ. ಗುಂಡ್ಯಾ ಸುಸ್ತು!

***

ದುಂಡ್ಯಾ: ರೀ, ಸೈಕಲ್ ಕೊಳ್ಳೋವಾಗ ಏನಾದರೂ ಮುರಿದರೆ ರಿಪೇರಿ ಮಾಡ್ಲಿ ಕೊಡ್ತೀವಿ ಅಂದಿದ್ರಿ.

ಅಂಗಡಿಯಾತ: ಹೌದು ಅಂದಿದ್ದೆ. ಈಗಲೂ ಅದನ್ನೇ ಹೇಳ್ತೀನಿ. ಏನು ಮುರಿದಿದೆ?

ದುಂಡ್ಯಾ: ನನ್ನ ಎಡಗಾಲು ಎಲುಬು.

***

ಮಂತ್ರಿಯೊಬ್ಬರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಎಲ್ಲ ವೃತ್ತ ಪತ್ರಿಕೆಗಳೂ ಈ ಸುದ್ದಿಯನ್ನು ದಪ್ಪಕ್ಷರದಲ್ಲಿ ಪ್ರಕಟಿಸಿದವು. ಎಲ್ಲ ಪತ್ರಿಕೆಗಳನ್ನೂ ಓದಿದ ಮಂತ್ರಿಗಳು ಪತ್ರಿಕೆಯೊಂದರ ಸಂಪಾದಕರಿಗೆ ಕರೆ ಮಾಡಿ ತರಾಟೆಗೆ ತೆಗೆದುಕೊಂಡರು.

ಏನ್ರೀ, ಏನು ಪ್ರಕಟಿಸಿದ್ದೀರಿ? ಎಂದು ದಬಾಯಿಸಿದರು.

ಸರಿಯಾಗಿಯೇ ಸುದ್ದೀ ಹಾಕಿದ್ದೇವೆ ಸರ್. ನೀವು ರಾಜೀನಾಮೆ ಕೊಟ್ಟಿದ್ದು ನಿಜ ತಾನೆ? ಸಂಪಾದಕರು ನುಡಿದರು.

ಸರಿ. ಆದರೆ ಒಳ್ಳೇ ಸುದ್ದಿ ಅನ್ನೋ ಕಾಲಂನಲ್ಲಿ ಪ್ರಕಟಿಸಿದ್ದೀರಲ್ರೀ ಮಂತ್ರಿಗಳು ಉದ್ಗರಿಸಿದರು.

***

ವಾರ್ಡಿನೊಳಗೆ ಬಂದ ವೈದ್ಯರು ದುಂಡ್ಯಾನನ್ನು ಕೇಳಿದರು ಹೇಗಿದ್ದೀರಿ ಇವತ್ತು? ಆರಾಮಿದ್ದೀರಲ್ವಾ? ಎಲ್ಲೀ ಆರಾಮು ಸರ್ ಉಸಿರಾಟವೇ ಕಷ್ಟವಾಗಿದೆ ದುಂಡ್ಯಾ ಪೇಚಾಡಿಕೊಂಡ.

ಹೌದು. ಏನ್ಮಾಡೋದು ನಮಗೂ ಆಕ್ಸೀಜನ್ ಸಿಲಿಂಡರ್ ಸಿಗುವುದು ಕಷ್ಟವಾಗಿದೆ. ಇರೋತನಕ ಉಸಿರಾಡೋದು ಅಷ್ಟೇ! ಎಂದರು ವೈದ್ಯರು.

***

ಶಿಕ್ಷಕರು ಆರೋಗ್ಯದ ಪಾಠ ಮಾಡಿ ಮುಗಿಸಿದರು.

ಮಕ್ಕಳೇ ಈಗ ನಾನು ಪ್ರಶ್ನೆ ಕೇಳುತ್ತೇನೆ ನೀವು ಉತ್ತರಿಸಿ ಅಂದರು.

ಎಲ್ಲರೂ ರೆಡಿ ಮೇಡಂ ಎಂದು ಕೂಗಿದರು.

'ಪ್ರಾಣಿಗಳಿಗೆ ಮುತ್ತು ಕೊಡುವುದು ಅಪಾಯ' ಇಂಥ ದುಷ್ಪರಿಣಾಮಕ್ಕೊಂದು ಉದಾಹರಣೆ ಕೊಡಿ.

ಮೇಡಂ, ಪಕ್ಕದ ಮನೆ ಆಂಟಿ ನಮ್ಮ ಸಾಕು ನಾಯಿಗೆ ಮುತ್ತು ನೀಡಿದ್ದರು. ಅದು ಒಂದು ವಾರದಲ್ಲಿ ಸತ್ತೇ ಹೋಯ್ತು ಎಂದ ದುಂಡ್ಯಾ.

ಅದಕ್ಕೇನಾಯ್ತು? ಕುತೂಹಲದಿಂದ ಕೇಳಿದರು.

ಮೇಡಂ, ಅದಕ್ಕೂ ಕೊರೊನಾ ಬಂತು ಎಂದ ದುಂಡ್ಯಾ.

(ಸಂಗ್ರಹ) ಪ್ರಕಾಶ ಎಸ್. ಮನ್ನಂಗಿ, ಮೋಟೆಬೆನ್ನೂರು




SANDHILIN सन्धिलिन
ಸಂಧಿಲಿನ್
ಸಂಧಿಲಿನ್ ಹಚ್ಚಿ ನೋವಿಗೆ ವಿದಾಯ ಹೇಳಿ!
ಶೀಘ್ರ ಪರಿಣಾಮಕಾರಿ




- ವಿವಿಧ ತರಹದ ನೋವಿಗೆ ಶೀಘ್ರ ಪರಿಣಾಮಕಾರಿ.
- ಕಳೆದ 14 ವರ್ಷಗಳಿಂದ ಲಕ್ಷಾಂತರ ಜನರ ಪ್ರಥಮ ಆಯ್ಕೆ.
- 'ಸಂಧಿಲಿನ್' ಲಿನಿಮೆಂಟ್‌ನ್ನು ಆಯುರ್ವೇದದ ಋಷಿಮುನಿ ಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
- ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.

ತಯಾರಕರು
SDM AYURVEDA PHARMACY
ISO / GMP CERTIFIED
ಶ್ರೀ ಧರ್ಮಸ್ಥಳ
ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
Ph / Fax: 0820 - 2520852
Email: sdmaph@gmail.com
ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ